ನಡೆಸುತ್ತಿವೆ. ಈಸ್ಟ್ ಇಂಡಿಯಾ ಕಂಪನಿಯವರು ಈ ದೇಶಕ್ಕೆ ವ್ಯಾಪಾರಕ್ಕೆಂದು ಬಂದು ರಾಜ್ಯವನ್ನು ಹಿಡಿದಿದ್ದರು. ಅದೇ ರೀತಿ ಉದ್ಯಮದಲ್ಲಿ ಅವರು ವಿದೇಶಿ ಕಂಪನಿಗಳು ಸ್ವದೇಶಿ ಮುಖವಾಡದಲ್ಲಿ ಉದ್ಯಮ ನಡೆಸುತ್ತಿವೆ. ಉತ್ತರದಲ್ಲಿ ಹೇಳಿರುವಂತೆ ಅವರ ವಾರ್ಷಿಕ ಅಂದಾಜು ವ್ಯವಹಾರ ಎಷ್ಟು ನಡೆಸುತ್ತಾರೆಂದು ಪ್ರಶ್ನೆ ಕೇಳಿದರೆ, ಈ ಸಂಸ್ಥೆಗಳು ಖಾಸಗಿ ಸಂಸ್ಥೆಗಳು ಸುಮಾರು 15 ಕೋಟಿ ರೂಪಾಯಿ ಲೆಕ್ಕ ಕೊಟ್ಟಿರುತ್ತಾರೆಂದು ಹೇಳಿದ್ದಾರೆ. ಲೆಕ್ಕವಿಲ್ಲದೆ ಎಷ್ಟು ಮಾಡುತ್ತಾರೋ ಗೊತ್ತಿಲ್ಲ.

ಅಧ್ಯಕ್ಷರು:– ಮಾನ್ಯ ಸದಸ್ಯರು ಉಪಪ್ರಶ್ನೆ ಕೇಳಿ.

ಶ್ರೀ ಕೆ. ಹರ್ಷಕುಮಾರ್ ಗೌಡ:– ಜೊತೆಗೆ ಸರ್ಕಾರಿ ಸಂಸ್ಥೆಗಳು ಕೇವಲ 36 ಲಕ್ಷ ರೂಪಾಯಿಗಳ ವ್ಯವಹಾರ ನಡೆಸುತ್ತಿವೆ. ಇದಕ್ಕೆ ಕಾರಣವೇನು ? ಮಾನ್ಯ ಮಂತ್ರಿಗಳು ಈಗಾಗಲೇ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಸಮರ್ಥರು ಇದ್ದೀರಿ, ಒಳ್ಳೆಯ ಚಿಂತನೆಯನ್ನು ಇಟ್ಟುಕೊಂಡು ಉತ್ಸಾಹ ಹಂಬಲದಿಂದ ಕೆಲಸ ಮಾಡುವುದಕ್ಕೆ ಹೊರಟಿದ್ದೀರಿ. ಯಾವ ರೀತಿಯ ಹತೋಟಿಯನ್ನು ಹಾಕುತ್ತೀರಿ ಈ ಸಂಸ್ಥೆಗಳ ಮೇಲೆ. ಡೆಂಕಲ್ ಹೆಸರಿನಲ್ಲಿ ಈ ರಾಷ್ಟ್ರದಲ್ಲಿ ಅಂಡರ್ ಡೆವಲೆಪ್‌ಮೆಂಟ್ ಕಂಟ್ರೀಸ್‌ಗಳನ್ನು ಅವರು ಹತೋಟಿಯಲ್ಲಿ ಹಿಡಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದೇ ರೀತಿ ಕರ್ನಾಟಕ ರಾಜ್ಯದಲ್ಲೂ ಆಗುತ್ತಿದೆ.

ಅಧ್ಯಕ್ಷರು:– ಮಾನ್ಯ ಸದಸ್ಯರು ಕನ್ಫೈಸ್ ಮಾಡಿ ಪ್ರಶ್ನೆ ಕೇಳಿ.

ಶ್ರೀ ಕೆ. ಹರ್ಷಕುಮಾರ ಗೌಡ:– ಇಡೀ ರಾಜ್ಯದಲ್ಲಿ ಉದ್ಯಮದಾರರು ಏನಿದ್ದಾರೆ ಅವರ ಶೋಷಣೆಯಾಗುತ್ತಿರುವುದನ್ನು ಹೇಗೆ ತಪ್ಪಿಸುತ್ತೀರಿ ಎಂದು ಕೇಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಪ್ರಕಾರ ಸ್ವದೇಶಿ ಸಂಸ್ಥೆಗಳು 21. ಇದು ನಮಗೆ ಮಾಹಿತಿ ಕೊಟ್ಟಿರತಕ್ಕದ್ದು. ಅದು ಆದ ಮೇಲೆ ನಾನು ಅಧಿಕಾರಿಗಳನ್ನು ಕೇಳಿದೆ ನನಗೆ ಗೊತ್ತಿರುವ ಒಂದು ಸಂಸ್ಥೆಯೇ ಇಲ್ಲವೆಂದು ಹೇಳಿದೆ. 8 ಮಾಹಿತಿ ಕೊಟ್ಟಿಲ್ಲವೆಂದು ಈಗ ತಾನೇ ತಂದುಕೊಟ್ಟಿದ್ದಾರೆ. ಅಲ್ಲಿಗೆ 21 ಪ್ಲಸ್ 8 ಒಟ್ಟು 29 ಖಾಸಗಿ ಸಂಸ್ಥೆಗಳು, 7 ಸರ್ಕಾರೀ ಹ್ಯಾಚರಿಗಳಲ್ಲಿ ಸುಮಾರು 180 ಲಕ್ಷ ಕೋಳಿಮರಿಗಳು ವರ್ಷಕ್ಕೆ ಉತ್ಪಾದನೆಯಾಗುತ್ತದೆ. ಅದು ಇನ್ನು ಎರಡು ಎರಡೂವರೆ ಕೋಟಿ ಆಗಬಹುದು. ಅವರು 15 ಕೋಟಿ ಎಂದು ಹೇಳಿದರು. ಈ ಅಡಿಷನಲ್ ಇನ್‌ಫರ್ಮೇಶನ್ ನೋಡಿದರೆ 25 ಕೋಟಿ ವ್ಯವಹಾರ ಇದೆ. ಇದರ ಮೇಲೆ ಹಿಡಿತವಿಲ್ಲ, ಇದರ ಬಗ್ಗೆ ಯಾವ ವಿಧವಾದ ಸಂಶಯ ಬೇಕಾಗಿಲ್ಲ, ಯಾವಾಗ ಸರ್ಕಾರದ ಹಿಡಿತ ಇರುವುದಿಲ್ಲವೋ, ಖಾಸಗಿಯವರ ಹತ್ತಿರ ಮಾಹಿತಿ ಇರುವುದಿಲ್ಲ, ಅಂದಾಜು ವಹಿವಾಟು ಇಷ್ಟಿದೆಯೆಂದು ಕಳ್ಳ ಲೆಕ್ಕ ಸುಳ್ಳುಲೆಕ್ಕ ಇಟ್ಟುಕೊಂಡು ಹೇಳಿರುತ್ತಾರೆ. 1988ರಲ್ಲಿ ಒಂದು ಆಕ್ಟ್ ಇತ್ತು. ಕರ್ನಾಟಕ ಎಸೆನ್ಷಿಯಲ್ ಕಂಟ್ರೋಲ್ ಆಕ್ಟ್ ಪ್ರಕಾರ 1988ರಿಂದ 1990ರವರೆಗೆ ಅದರ ಕ್ವಾಲಿಟಿ ನೋಡಿಕೊಳ್ಳತಕ್ಕದ್ದು ಹ್ಯಾಚರಿ ಮತ್ತು ಎಗ್ ಪ್ರೊಡೆಕ್ಷನ್ ಕಮರ್ಷಿಯಲ್ ಎಗ್ ಸೇರಿಕೊಂಡು ಆಕ್ಟ್ ಇತ್ತು. ಅದು 1990ಕ್ಕೆ ಲ್ಯಾಪ್ಸ್ ಆಯಿತು. 1990ರಿಂದ 1993ರವರೆಗೆ ಏನೂ ಇಲ್ಲ. ನಾನು ಈಗಾಗಲೇ ಲಾ ಸೆಕ್ರೆಟರಿಯವರ ಹತ್ತಿರ ಮಾತನಾಡಿದ್ದೇನೆ. ಕರ್ನಾಟಕ ಎಸೆನ್ಷಿಯಲ್ ಕಂಟ್ರೋಲ್ ಆಕ್ಟ್‌ನ್ನು ಈ ಸದನ ಮುಗಿಯುವುದರೊಳಗೆ ಮಾರ್ಚಿ 31ರೊಳಗೆ ಸಭೆಯ ಮುಂದೆ ಮಂಡಿಸುತ್ತೇನೆ.

ANNOUNCEMENT

Mr. Speaker:– I welcome the Brazilian Parlimentary Delegation who are witnessing the Assembly Proceedings from the Speaker's gallery, on behalf of this House.